**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಶಶೀಲ್ ಜಿ. ನಮೋಶಿ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1861**

**ಉತ್ತರಿಸಬೇಕಾದ ದಿನಾಂಕ : 15-03-2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸೌಹಾರ್ದ ಸಹಕಾರ ಕೋ-ಆಪರೇಟಿವ್ ಸೋಸೈಟಿಗಳಲ್ಲಿ ಮತ್ತು ಸೌಹಾರ್ದ ಸಹಕಾರ ಬ್ಯಾಂಕುಗಳಲ್ಲಿ ಸಾಲ ವಂಚನೆ ಪ್ರಕರಣಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. | ರಾಜ್ಯದ ಕೆಲವು ಸೌಹಾರ್ದ ಸಹಕಾರಿ ಹಾಗೂ ಬ್ಯಾಂಕುಗಳಲ್ಲಿ ವಂಚನೆ ಪ್ರಕರಣಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಅಂತಹವರ ಮೇಲೆ ಇದೂವರೆಗೂ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ. ಮತ್ತು ಎಷ್ಟು ಪ್ರಕರಣಗಳನ್ನು ಇತ್ಯರ್ಥ ಗೊಳಿಸಲಾಗಿದೆ. ಇತ್ಯರ್ಥಗೊಳಿಸದಿರುವ ಪ್ರಕರಣಗಳಾವುವು. ಈ ಪ್ರಕರಣಗಳನ್ನು ಇತ್ಯರ್ಥಗೊಳಿಸದಿರುವುದಕ್ಕೆ ಕಾರಣಗಳೇನು; (ಈ ಕುರಿತು ಸಂಪೂರ್ಣ ವಿವರ ನೀಡುವುದು) | ಒಟ್ಟು **18** ಸೌಹಾರ್ದ ಸಹಕಾರಿಗಳಲ್ಲಿ ವಂಚನೆ ಪ್ರಕರಣ ಕಂಡು ಬಂದಿರುತ್ತದೆ. ವಿವರಗಳನ್ನು **ಅನುಬಂಧ-01 ಮತ್ತು 02** ರಲ್ಲಿ ನೀಡಲಾಗಿದೆ.<br><br>ಕ್ರಿಮಿನಲ್ ಹಾಗೂ ಸಿಓಡಿ ತನಿಖೆ ಪ್ರಗತಿಯಲ್ಲಿರುತ್ತವೆ. ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾಖಲಾಗಿರುವ ಖಾಸಗಿ ಫಿರ್ಯಾದುಗಳು ವಿಚಾರಣಾ ಹಂತದಲ್ಲಿದ್ದು, ಈ ಎಲ್ಲಾ ಪ್ರಕರಣಗಳು ಇತ್ಯರ್ಥಗೊಂಡ ನಂತರ ನಿಯಮಾನುಸಾರ ಕ್ರಮವಿಡಲಾಗುವುದು.<br><br>ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿರುವ ದಾವೆಗಳು ಇತ್ಯರ್ಥವಾದ ನಂತರ ನಿಯಮಾನುಸಾರ ವಸೂಲಾತಿ ಕ್ರಮ ಅನುಸರಿಸಿ, ಠೇವಣಿದಾರರಿಗೆ ಠೇವಣಿ ಮೊತ್ತ ಹಿಂದಿರುಗಿಸಲಾಗುವುದು. |
| ಇ) | ವಂಚನೆಗೊಳಗಾದ ಠೇವಣಿದಾರರಿಗೆ ಯಾವ ರೀತಿಯ ಪರಿಹಾರವನ್ನು ಇಲ್ಲಿಯವರೆಗೆ ಸರ್ಕಾರ ಒದಗಿಸಿದೆ. ಒದಗಿಸದಿದ್ದಲ್ಲಿ ಕಾರಣಗಳೇನು: (ವಿವರವಾದ ಮಾಹಿತಿ ನೀಡುವುದು) | ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಈ ಸಹಕಾರಿಯಲ್ಲಿ 729 ಠೇವಣಿದಾರರಿಗೆ ರೂ.26.97 ಕೋಟಿ ಠೇವಣಿ ಮೊತ್ತವನ್ನು ವಿಶೇಷಾಧಿಕಾರಿಯ ಅವಧಿಯಲ್ಲಿ ಮರುಪಾವತಿಸಲಾಗಿರುತ್ತದೆ.<br><br>ಸರ್ಕಾರವು ಕರ್ನಾಟಕ ಹಣಕಾಸು ಸಂಸ್ಥೆಗಳ ಠೇವಣಿದಾರರ ಹಿತರಕ್ಷಣಾ ಕಾಯ್ದೆ 2004 ರಡಿಯಲ್ಲಿ ಕಂದಾಯ ಇಲಾಖೆಯಿಂದ 08 ಸೌಹಾರ್ದ ಸಹಕಾರಿಗಳಿಗೆ ಸಕ್ಷಮ ಪ್ರಾಧಿಕಾರಿಗಳನ್ನು ನೇಮಕ ಮಾಡಿದ್ದು, ಸಕ್ಷಮ ಪ್ರಾಧಿಕಾರಿಗಳು ವಸೂಲಾತಿಗೆ ಕ್ರಮವಿಟ್ಟಿರುತ್ತಾರೆ. |

| | | |
|---|---|---|
| | | • ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಲಂ 25(ಎ-2) ರೀತ್ಯಾ **10** ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರುಗಳನ್ನು ಅನರ್ಹಗೊಳಿಸಿ, ಸಹಕಾರಿಗೆ ವಿಶೇಷಾಧಿಕಾರಿಯನ್ನು ನೇಮಿಸಲಾಗಿದೆ. ವಂಚನೆಗೆ ಕಾರಣರಾದ ಸಂಘದ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳ ವಿರುದ್ಧ ವಸೂಲಾತಿಗೆ ಅಧಿಭಾರ ಪ್ರಕರಣ ದಾಖಲಿಸಿ, ಅವರ ಸ್ಥಿರಾಸ್ತಿಗಳನ್ನು ಆದೇಶ ಪೂರ್ವ ಜಪ್ತಿಗೆ ಒಳಪಡಿಸಲಾಗಿದೆ.<br>• **09** ಪ್ರಕರಣಗಳಲ್ಲಿ ಸಿವಿಲ್ ದಾವೆ ಹೂಡಲಾಗಿದ್ದು, ಪ್ರಕರಣಗಳು ವಿಚಾರಣಾಧೀನವಾಗಿರುತ್ತವೆ.<br>• **04** ಪ್ರಕರಣಗಳಲ್ಲಿ ಕ್ರಿಮಿನಲ್ ದಾವೆ ದಾಖಲಿಸಲಾಗಿದ್ದು, ತನಿಖಾ ಹಂತದಲ್ಲಿರುತ್ತದೆ.<br>• **02** ಪ್ರಕರಣಗಳಲ್ಲಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಖಾಸಗಿ ಫಿರ್ಯಾದು ದಾಖಲಿಸಲಾಗಿದ್ದು, ಪ್ರಕರಣಗಳು ವಿಚಾರಣಾಧೀನವಾಗಿರುತ್ತವೆ.<br>• **02** ಪ್ರಕರಣ ಸಿಓಡಿ ತನಿಖೆಗೆ ವಹಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿರುತ್ತದೆ.<br>• **08** ಸೌಹಾರ್ದ ಸಹಕಾರಿಗಳನ್ನು ಸಮಾಪನೆಗೊಳಿಸಿ, ಸಮಾಪನಾಧಿಕಾರಿಗಳನ್ನು ನೇಮಿಸಲಾಗಿದೆ. |
| ಈ) | ಹಲವಾರು ವರ್ಷಗಳಿಂದ ಇಂತಹ ವಂಚನೆ ಪ್ರಕರಣಗಳನ್ನು ಪರಿಹರಿಸುವುದಕ್ಕೆ ಸಾಧ್ಯ ವಾಗದಿರಲು ಕಾರಣಗಳೇನು; ಈ ಪ್ರಕರಣಗಳಲ್ಲಿ ಭಾಗಿಯಾದ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಆಡಳಿತ ಮಂಡಳಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ; ಕೈಗೊಂಡಿದ್ದಲ್ಲಿ ವಿವರವಾದ ಮಾಹಿತಿ ನೀಡುವುದು; ಕೈಗೊಳ್ಳದಿದ್ದಲ್ಲಿ ಯಾವ ಕಾರಣಕ್ಕೆ ಕ್ರಮಕೈಗೊಂಡಿರುವುದಿಲ್ಲ; ಯಾವ ಕಾಲಮಿತಿಯೊಳಗೆ ಈ ಎಲ್ಲಾ ಪ್ರಕರಣಗಳನ್ನು ಇತ್ಯರ್ಥಗೊಳಿಸ ಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಉಪ ಪ್ರಶ್ನೆ ಸಂಖ್ಯೆ- ಆ) ಮತ್ತು ಇ) ರಲ್ಲಿ ವಿವರಿಸಿರುವಂತೆ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಸಿಒ 45 ಪಿಎಂಸಿ 2022**

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

**ಅನುಬಂಧ-1** - LCG - 1961

**ಗ್ರಾಹಕರಿಗೆ ವಂಚಿಸಿರುವ ಸೌಹಾರ್ದ ಸಹಕಾರಿಗಳ ವಿವರ:-**

| ಕ್ರಸಂ | ಜಿಲ್ಲೆ | ಹೆಸರು |
|---|---|---|
| 1 | ಬೆಂಗಳೂರು. | ವಿನಿವಿಂಕ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು. |
| 2 | ಬೆಂಗಳೂರು. | ಸ್ವಯಂ ಕೃಷಿ ಸೌಹಾರ್ದ ಕ್ರೆಡಿಟ್ ಕೋಆಪರೇಟೀವ್ ಲಿ., ಬೆಂಗಳೂರು. |
| 3 | ಬೆಂಗಳೂರು. | ಶ್ರೀ ಶಕ್ತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು. |
| 4 | ಬೆಂಗಳೂರು. | ಶ್ರೇಯಸ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು. |
| 5 | ಬೆಂಗಳೂರು. | ಶ್ರೀ ಕಣ್ವ ಸೌಹಾರ್ದಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು. |
| 6 | ಬೆಂಗಳೂರು. | ಶ್ರೀ ಗುರು ಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು. |
| 7 | ಬೆಂಗಳೂರು. | ಶ್ರೀ ವಶಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು |
| 8 | ಬೆಂಗಳೂರು | ಬೆಳ್ಳಿಬೆಳಕು ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು |
| 9 | ಕೋಲಾರ | ಸೆವೆನ್ ಹಿಲ್ಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಾಲೂರು, ಕೋಲಾರ. |
| 10 | ಬೆಳಗಾವಿ | ಶ್ರೀ ಶಿವಸಾಗರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕ, ಬೆಳಗಾವಿ. |
| 11 | ಬೆಳಗಾವಿ | ದಿ ಬೆಳಗಾವಿ ಲಿಬರಲ್ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ. |
| 12 | ಬೆಳಗಾವಿ | ಶ್ರೀ ಆಶ್ರಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ. |
| 13 | ಬೆಳಗಾವಿ | ಶ್ರೀ ಭೀಮಾಂಬಿಕ ಮಹಿಳಾ ವಿವಿದೋದ್ದೇಶ ಸೌಹಾರ್ದಸಹಕಾರಿ ನಿ., ಬೆಳಗಾವಿ. |
| 14 | ಬೆಳಗಾವಿ | ಗಜರಾಜ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ. |
| 15 | ಕೊಪ್ಪಳ | ಶ್ರೀ ಸಾಯಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ.,ಗಂಗಾವತಿ, ಕೊಪ್ಪಳ. |
| 16 | ವಿಜಯಪುರ | ಎಸ್‌ಎಂಎನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ |
| 17 | ಬೆಳಗಾವಿ | ಬಸವೇಶ್ವರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಜಿ: ಬೆಳಗಾವಿ |
| 18 | ಬೆಳಗಾವಿ | ಶ್ರೀ ಷಡಕ್ಷರಿ ಶಿವಯೋಗಿ ಸಿದ್ದಾರಾಮೇಶ್ವರಿ ಕ್ರೆಡಿಟ್ ಸೌಹಾರ್ದ ಸಹಕರಿ ನಿ., ದಾದಬಾನಹಟ್ಟಿ |

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಕಾನೂನು ಕೋಶ)
ಸಹಕಾರ ಸಂಘಗಳ ನಿಬಂಧಕರ ಕಚೇರಿ
ನಂ. 1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-560 052

## ಅನುಬಂಧ-೩ - LCQ-1861

## ಗ್ರಾಹಕರಿಗೆ ವಂಚಿಸಿರುವ ಸೌಹಾರ್ದ ಸಹಕಾರಿಗಳ ವಿವರ:-

| ಕ್ರಸಂ | ಜಿಲ್ಲೆ | ಹೆಸರು |
|---|---|---|
| | | **ಕರ್ನಾಟಕ ಹಣಕಾಸು ಸಂಸ್ಥೆಗಳ ಠೇವಣಿಗಳ ಹಿತರಕ್ಷಣಾ ಕಾಯ್ದೆ 2004ರಡಿ ಕಂದಾಯ ಇಲಾಖೆಯಿಂದ ನೇಮಿಸಲ್ಪಟ್ಟಿರುವ ಸಕ್ಷಮ ಪ್ರಾಧಿಕಾರ** |
| 1 | ಬೆಂಗಳೂರು. | ವಿನಿವಿಂಕ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು. |
| 2 | ಬೆಂಗಳೂರು. | ಶ್ರೀ ಶಕ್ತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು. |
| 3 | ಕೋಲಾರ | ಸೆವೆನ್ ಹಿಲ್ಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಾಲೂರು, ಕೋಲಾರ. |
| 4 | ಬೆಳಗಾವಿ | ಶ್ರೀ ಭೀಮಾಂಬಿಕ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ. |
| 5 | ಬೆಳಗಾವಿ | ಗಜರಾಜ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ. |
| 6 | ಬೆಂಗಳೂರು. | ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು. |
| 7 | ಬೆಂಗಳೂರು. | ಶ್ರೀ ಗುರು ಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು. |
| 8 | ವಿಜಯಪುರ | ಎಸ್‌ಎಂಎನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ |
| | | **ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಲಂ 25(ಎ-2) ರೀತ್ಯ ಅನರ್ಹತೆ.** |
| 1 | ಬೆಂಗಳೂರು. | ವಿನಿವಿಂಕ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು. |
| 2 | ಬೆಂಗಳೂರು. | ಸ್ವಯಂ ಕೃಷಿ ಸೌಹಾರ್ದ ಕ್ರೆಡಿಟ್ ಕೋಆಪರೇಟೀವ್ ಲಿ., ಬೆಂಗಳೂರು. |
| 3 | ಬೆಂಗಳೂರು. | ಶ್ರೀ ಶಕ್ತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು. |
| 4 | ಕೋಲಾರ | ಸೆವೆನ್ ಹಿಲ್ಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಾಲೂರು, ಕೋಲಾರ. |
| 5 | ಕೊಪ್ಪಳ | ಶ್ರೀ ಸಾಯಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ, ಕೊಪ್ಪಳ. |
| 6 | ಬೆಂಗಳೂರು. | ಶ್ರೇಯಸ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು. |
| 7 | ಬೆಂಗಳೂರು. | ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು. |
| 8 | ಬೆಂಗಳೂರು. | ಶ್ರೀ ಗುರು ಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು. |
| 9 | ಬೆಂಗಳೂರು. | ಶ್ರೀ ವಶಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು |
| 10 | ಬೆಳಗಾವಿ | ಶ್ರೀ ಆಶ್ರಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ. |
| | | **ಸಿವಿಲ್ ದಾವೆ** |
| 1 | ಬೆಂಗಳೂರು. | ಶ್ರೀ ಶಕ್ತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು. |
| 2 | ಕೋಲಾರ | ಸೆವೆನ್ ಹಿಲ್ಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಾಲೂರು, ಕೋಲಾರ. |
| 3 | ಬೆಳಗಾವಿ | ಶ್ರೀ ಶಿವಸಾಗರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕ, ಬೆಳಗಾವಿ. |
| 4 | ಬೆಳಗಾವಿ | ದಿ ಬೆಳಗಾವಿ ಲಿಬರಲ್ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ. |
| 5 | ಕೊಪ್ಪಳ | ಶ್ರೀ ಸಾಯಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ, ಕೊಪ್ಪಳ. |